## ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 545
ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 12.12.2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು.

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಇಡೀ ಏಷ್ಯಾ ಖಂಡದಲ್ಲಿ ನೀರಾವರಿ ಯೋಜನೆಯ ಅಡಿಯಲ್ಲಿ ಮುಳುಗಡೆಯಾಗಿರುವ ಬೃಹತ್ ವಾಣಿಜ್ಯ ನಗರ ಬಾಗಲಕೋಟೆ ಎಂಬುವುದು ನಿಜವೇ; | ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಧಿತವಾಗುವ ಪ್ರದೇಶಗಳಲ್ಲಿ ಬಾಗಲಕೋಟೆ ಒಂದು ದೊಡ್ಡ ನಗರವಾಗಿದೆ. |
| ಆ) | ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರ ಎಂದು ಗುರುತಿಸಿಕೊಂಡು ಯು.ಕೆ.ಪಿ ಅಡಿಯಲ್ಲಿ ಮುಳುಗಡೆಯಾಗಿರುವ ಪ್ರದೇಶದ ಜನರ ವಸತಿಗಾಗಿ ಜನವಸತಿಗಾಗಿ ನಿವೇಶನಗಳು ಹಾಗೂ ಸಣ್ಣ ಮತ್ತು ದೊಡ್ಡ ಅತಿ ದೊಡ್ಡ ಅಂಗಡಿಗಳ ಮಾಲೀಕರಿಗೆ ನವನಗರದ 1, 2 ಮತ್ತು 3ನೇ ಯುನಿಟ್ (Unit) ಗಳಲ್ಲಿ ಪರ್ಯಾಯವಾಗಿ ಮೂರು ನಾಲ್ಕು ಸೆಕ್ಟರ್‌ಗಳನ್ನು ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ವಿತರಣೆ ಮಾಡಲಾಗಿದ್ದು, ಅಲ್ಲಿ ಅವಶ್ಯಕ ಜನಸಾಂದ್ರತೆ ಇರದ ಕಾರಣ ವ್ಯಾಪಾರ ಚಟುವಟಿಕೆಗಳಿಲ್ಲದೇ ವ್ಯಾಪಾರಸ್ಥರು ಬಹಳ ತೊಂದರೆ ಅನುಭವಿಸುತ್ತಿರುವುದು; ನಿಜವೇ; | ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನ ಆರ್.ಎಲ್. 521.00 ಮೀ ವರೆಗೆ ಬಾಧಿತಗೊಳಗಾದ ಬಾಗಲಕೋಟೆ ನಗರದ ಸಂತ್ರಸ್ಥರಿಗೆ ನವನಗರದ ಯುನಿಟ್-1ರಲ್ಲಿ ಮತ್ತು 521.00ಮೀ ರಿಂದ 523.00 ಮೀ ವರೆಗೆ ಯುನಿಟ್-2 ರಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.<br><br>ಆರ್.ಎಲ್. 525.00 ಮೀ ವರೆಗಿನ ಬಾಧಿತವಾಗುವ ನಗರದ ವಾಣಿಜ್ಯ ಚಟುವಟಿಕೆಗಳ ವ್ಯಾಪಾರಸ್ಥರಿಗೆ ನವನಗರದ 4 ಸೆಕ್ಟರಗಳನ್ನು ಪ್ರತ್ಯೇಕವಾಗಿ ಗುರುತಿಸಿ, ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಭಾಗಶಃ ವ್ಯಾಪಾರಸ್ಥರು ವ್ಯಾಪಾರ ಚಟುವಟಿಕೆಗಳನ್ನು 02 ಕಡೆ ನಡೆಸುತ್ತಿದ್ದಾರೆ.. |
| ಇ) | ಮುಳುಗಡೆಯಿಂದ ತೊಂದರೆಗೊಳಗಾದ ಸಣ್ಣ ಮತ್ತು ದೊಡ್ಡ ವ್ಯಾಪಾರಸ್ಥರಿಗೆ ಒಂದೇ ಕಡೆ ಅಂಗಡಿಗಳನ್ನು ನಿರ್ಮಿಸಿಕೊಡಲು ಜಿಲ್ಲೆಯ ವ್ಯಾಪಾರಸ್ಥರು ಹಲವಾರು ವರ್ಷಗಳಿಂದ ಬೇಡಿಕೆ ಇಟ್ಟಿರುವುದು ನಿಜವೇ; | ಬಾಗಲಕೋಟೆ ನವನಗರದ ಯುನಿಟ್-1, 2, 3 ವಿದ್ಯಾಗಿರಿ, ಹಳೆನಗರಕ್ಕೆ ಮಧ್ಯವರ್ತಿಯಾಗುವ ಯುನಿಟ್-3ರ ಸೆಕ್ಟರ್ ನಂ. 'ಸಿ' ಹಾಗೂ 'ಡಿ' ಗಳ ಅಂದಾಜು 200 ಎಕರೆ ಕ್ಷೇತ್ರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಕಾಯ್ದಿರಿಸಿ ಪರಿಷ್ಕೃತ ನಕ್ಷೆಗೆ ಅನುಮೋದನೆಯ ಪ್ರಸ್ತಾವನೆಯು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಪರಿಶೀಲನೆಯಲ್ಲಿದೆ. |
| ಈ) | ಹಾಗಿದ್ದಲ್ಲಿ ನವನಗರದ ಯುನಿಟ್ (Unit) 1, 2, 3 ವಿದ್ಯಾಗಿರಿ, ಹಳೆನಗರಕ್ಕೆ ಮಧ್ಯವರ್ತಿಯಾಗುವ ಪ್ರದೇಶದಲ್ಲಿ ಸುಮಾರು 200 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಅಂಗಡಿಗಳನ್ನು ನಿರ್ಮಿಸಿ ಅಲ್ಲಿ ಸ್ಟೇಷನರಿ, ಕಿರಾಣಿ, ರೆಡಿಮೆಡ್, ಜ್ಯೂವೆಲರಿ, ಕಪಡಾ(ಬಟ್ಟೆ) ಎಲೆಕ್ಟ್ರೀಕ್, ಪಾತ್ರೆ, ಬಾರ್‌ದಾನ್, ಹೂವು ಹಣ್ಣು ಇತ್ಯಾದಿ ಸಣ್ಣ ಪುಟ್ಟ ಎಲ್ಲ ಬಗೆಯ ವ್ಯಾಪಾರಸ್ಥರಿಗಾಗಿ ಸಣ್ಣ ದೊಡ್ಡ ವ್ಯಾಪಾರ ಮಳಿಗೆಗಳ ಸಮುಚ್ಚೆಯಗಳನ್ನು ನಿರ್ಮಾಣ ಮಾಡಿಕೊಟ್ಟು ಸ್ಪರ್ಧಾತ್ಮಕ ಮತ್ತು ಗುಣಮಟ್ಟದ ವ್ಯಾಪಾರಿ ಚಟುವಟಿಕೆಗಳು ಬೆಳೆಯಲು ಸಾಧ್ಯವಾಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ? | |

ಸಂಖ್ಯೆ:ಜಸಂಇ 87 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು